**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಸಿಪೆಟ್, ಮೈಸೂರು ಸಂಸ್ಥೆಯವರ ಮುಖ್ಯಮಂತ್ರಿಗಳ ಕರ್ನಾಟಕ ಕೌಶಲ್ಯ ಯೋಜನೆಯಡಿಯಲ್ಲಿ ತರಬೇತಿ ಕಾರ್ಯಕ್ರಮಗಳಿಗೆ ಮಂಜೂರಾತಿಯನ್ನು ನೀಡುವ ಬಗ್ಗೆ.

**ಓದಲಾಗಿದೆ:**
1. ಸಿಎಂಕೆಕೆವೈ ಸರ್ಕಾರಿ ಆದೇಶದ ಸಂಖ್ಯೆ: ಕೌಉಜಿಇ 49 ಕೈತಶಿ (ಭಾಗ-1), ದಿನಾಂಕ: 08.05-2017.
2. ದಿನಾಂಕ: 20.06.2017 ಸಿಪೆಟ್, ಮೈಸೂರು ಸಂಸ್ಥೆಯವರ ತರಬೇತಿ ಕಾರ್ಯಕ್ರಮಗಳ ಪ್ರಸ್ತಾವನೆ.
3. ಪರಿಶೀಲನಾ ಸಮಿತಿ ಸಭೆ ದಿನಾಂಕ: 19.08.2017ರ ನಡವಳಿಯ ಕಂಡಿಕೆ ಸಂಖ್ಯೆ: 5.1ರಲ್ಲಿ ತರಬೇತಿ ಕಾರ್ಯಕ್ರಮಗಳಿಗೆ ಶಿಫಾರಸ್ಸು.
4. ಅಧಿಕಾರಯುಕ್ತ ಸಮಿತಿ ಸಭೆ ದಿನಾಂಕ: 22-08-2017ರ ನಡವಳಿಗಳ ಕಂಡಿಕೆ ಸಂಖ್ಯೆ 9.1ರನ್ವಯ ತರಬೇತಿ ಕಾರ್ಯಕ್ರಮಗಳ ಅನುಮೋದನೆ.
5. ಆರ್ಥಿಕ ಇಲಾಖೆಯು ಅಧಿಸೂಚನೆ ಸಂಖ್ಯೆ: ಆಇ 1132 ವೆಚ್ಚ 12/17, ದಿನಾಂಕ: 07.10.2017ರಲ್ಲಿ ಕೆಟಿಪಿಪಿ ಕಾಯ್ದೆಯ ಕಲಂ 4(ಜಿ)ಯಡಿ ವಿನಾಯಿತಿ.
6. ಸರ್ಕಾರದ ಸುತ್ತೋಲೆ ಸಂಖ್ಯೆ: ಕೌಉಜೀ 311 ಕೈತಇ 2017, ದಿನಾಂಕ: 23-08-2017.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಸಂಖ್ಯೆ (2) ರಲ್ಲಿ ಸಿಪೆಟ್, ಮೈಸೂರು ಸಂಸ್ಥೆಯವರಿಂದ ಮುಖ್ಯಮಂತ್ರಿಗಳ ಕರ್ನಾಟಕ ಕೌಶಲ್ಯ ಯೋಜನೆಯಡಿಯಲ್ಲಿ ವೃತ್ತಿ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸದರಿ ಪ್ರಸ್ತಾವನೆಯನ್ನು ಪರಿಶೋಧಿಸಿ ಪರಿಶೀಲನಾ ಸಮಿತಿಯ ದಿನಾಂಕ: 19-08-2017ರಂದು ನಡೆದ ಸಭೆಯ ನಿರ್ಣಯದ ಕಂಡಿಕೆ. 5.1ರನ್ವಯ ಅಧಿಕಾರಯುಕ್ತರ ಸಮಿತಿ ಮುಂದೆ ಮಂಡಿಸಿ ಅನುಮೋದನೆ ಪಡೆಯಲು ಶಿಫಾರಸ್ಸು ಮಾಡಿದೆ. ಅಧಿಕಾರಯುಕ್ತ ಸಮಿತಿಯು ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 248 ಕೈತಇ 2017, ದಿನಾಂಕ: 14.08.2017 ರಲ್ಲಿ ನೀಡಿರುವ ಆರ್ಥಿಕ ಅಧಿಕಾರವನ್ನು ಚಲಾಯಿಸಿ ಅನುಷ್ಠಾನವನ್ನು ಕೈಗೊಳ್ಳಲು ಅನುಮೋದನೆಯನ್ನು ನೀಡಿತು. ಆರ್ಥಿಕ ಇಲಾಖೆಯು ಉಲ್ಲೇಖ (5) ರಲ್ಲಿನ ಅಧಿಸೂಚನೆಯಂತೆ ಸದರಿ ಪ್ರಸ್ತಾವನೆಗೆ ಕೆ.ಟಿ.ಪಿ.ಪಿ ಅಧಿನಿಯಮ 1999 ರ ಕಲಂ 4(ಜಿ) ರಡಿ ವಿನಾಯಿತಿಯನ್ನು ನೀಡಿದೆ. ಈ ಪ್ರಸ್ತಾವನೆಗೆ ಮೇಲೆ ಓದಲಾದ ಕ್ರಮಸಂಖ್ಯೆ (4)ರ ದಿನಾಂಕ: 22-08-2017ರ ನಡವಳಿಯ ಕಂಡಿಕೆ (9.1) ರಲ್ಲಿ ಅನುಮೋದಿಸಿ ***ಅನುಬಂಧ-1*** ರಲ್ಲಿ ತರಬೇತಿ ಕೇಂದ್ರವಾರು ಆರ್ಥಿಕ ಮತ್ತು ಭೌತಿಕ ಗುರಿಗಳಿಗೆ ಅನುಷ್ಠಾನಗೊಳಿಸಲು ತಿಳಿಸಿದೆ.

ಆರ್ಥಿಕ ಇಲಾಖೆಯು ಈ ಸಂಸ್ಥೆಗೆ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ಯಡಿ ಓದಲಾದ (5) ರಲ್ಲಿ **1 ವಲಯ ಹಾಗೂ 3 ಜಾಬ್‌ರೋಲ್‌ಗಳಲ್ಲಿ ಒಟ್ಟು 300 ಅಭ್ಯರ್ಥಿಗಳಿಗೆ 18.792 ಲಕ್ಷ ರೂಗಳ (ಹದಿನೆಂಟು ಲಕ್ಷ ಏಪ್ಪತ್ತೊಂಬತ್ತು ಸಾವಿರದ ಇನ್ನೂರು ರೂಗಳು ಮಾತ್ರ)** ಮೊತ್ತದಲ್ಲಿ ತರಬೇತಿಯನ್ನು ನೀಡಲು ವಿನಾಯಿತಿಯನ್ನು ನೀಡಿದೆ.

ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಮಂತ್ರಾಲಯವು ನಿಗದಿಪಡಿಸಿದ ಸಾಮಾನ್ಯ ಮಾನದಂಡಗಳ (ಕ್ರ.ಸಂ.H-22011/2/14-SDE-1, dated: 15.07.2015 and 20.05.2016: Schedule-IV)ರನ್ವಯ ಕಂತುಗಳಲ್ಲಿ ಪಾವತಿ ಮಾಡುವ ವಿಧಾನದ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡುವುದು.

ಎಲ್ಲಾ ತರಬೇತಿ ಕಾರ್ಯಕ್ರಮಗಳು ಪೂರ್ಣಗೊಂಡ ನಂತರ ಪ್ರಮಾಣಪತ್ರಗಳನ್ನು ನೀಡುವುದು. ಪ್ರಮಾಣಪತ್ರವನ್ನು ನೀಡಿದ ನಂತರ ಕನಿಷ್ಟ ಶೇಕಡ 70ರಷ್ಟು ಅಭ್ಯರ್ಥಿಗಳಿಗೆ ಉದ್ಯೋಗ ನಿಯುಕ್ತಿಗೊಳಿಸುವುದು ಅಥವಾ ಸ್ವಯಂ ಉದ್ಯೋಗ ಕಲ್ಪಿಸುವುದು.

ಎಲ್ಲಾ ತರಬೇತಿ ಕಾರ್ಯಕ್ರಮಗಳನ್ನು 2017-18ರ ಆರ್ಥಿಕ ವರ್ಷದಲ್ಲಿಯೇ ಪ್ರಾರಂಭಿಸುವುದು. ಮಾರ್ಗಸೂಚಿಯನ್ನು ಅನುಸರಿಸಿ ಉಸ್ತುವಾರಿ ಮಾಹಿತಿ ವ್ಯವಸ್ಥೆಯನ್ನು (ಎಂಐಎಸ್) ತಯಾರಿಸಿ ಕಾರ್ಯಕ್ರಮದ ಅನುಷ್ಠಾನದ ಜವಾಬ್ದಾರಿಯನ್ನು ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆಯವರು ನಿರ್ದೇಶಕರು ಕೌಶಲ್ಯ ಮಿಷನ್ ಮತ್ತು ನಿರ್ದೇಶಕರು ಉದ್ಯೋಗ ಮತ್ತು ತರಬೇತಿ ಇಲಾಖೆಯವರ ಸಹಾಯದೊಂದಿಗೆ ಅನುಷ್ಠಾನಗೊಳಿಸುವುದು.

ಆದ್ದರಿಂದ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂ: ಕೌಉಜಿಇಐ 32 ಕೌಗುಸೇ 2017, ಬೆಂಗಳೂರು, ದಿನಾಂಕ: .10.2017**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ **ಸಿಪೆಟ್, ಮೈಸೂರು ಸಂಸ್ಥೆ,** ನಂ. 437/ಎ, **ಹೆಬ್ಬಾಳ ಇಂಡಸ್ಟ್ರೀಯಲ್ ಏರಿಯ, ಮೈಸುರು-560 016** ರವರು ತರಬೇತಿ ನೀಡಲು ಗುರಿಗಳ ಹಂಚಿಕೆ, ಅಭ್ಯರ್ಥಿಗಳಿಗೆ ತರಬೇತಿ, ಮೌಲ್ಯಮಾಪನ, ಪ್ರಮಾಣೀಕರಣ, ಉದ್ಯೋಗ ನಿಯುಕ್ತಿ ಮತ್ತು ಉದ್ಯೋಗ ನಿಯುಕ್ತಿ ನಂತರದ ಸೇವೆಗಳ ಕುರಿತು ವಿಧಾನಗಳ ಮಾರ್ಗಸೂಚಿಯನ್ನು ಅನುಸರಿಸಿ ***ಅನುಬಂಧ-1*** ರಲ್ಲಿ ನಮೂದಿಸಿದ ತರಬೇತಿ ಸಂಸ್ಥೆಗಳಲ್ಲಿ ಅವುಗಳ ಎದುರಿಗೆ ನಮೂದಿಸಿದ ಉದ್ಯೋಗ ವೃತ್ತಿ ತರಬೇತಿಗಳನ್ನು ಕೈಗೊಳ್ಳಲು **1 ವಲಯ ಹಾಗೂ 3 ಜಾಬ್‌ರೋಲ್‌ಗಳಲ್ಲಿ ಒಟ್ಟು 300 ಅಭ್ಯರ್ಥಿಗಳಿಗೆ 18.792 ಲಕ್ಷ ರೂಗಳ (ಹದಿನೆಂಟು ಲಕ್ಷ ಏಪ್ಪತ್ತೊಂಬತ್ತು ಸಾವಿರದ ಇನ್ನೂರು ರೂಗಳು ಮಾತ್ರ)** ರೂ ಗಳಿಗೆ ಆರ್ಥಿಕ ಇಲಾಖೆ ಅಧಿಸೂಚನೆ ಸಂಖ್ಯೆ: ಆಇ 1132 ವೆಚ್ಚ 12/17, ದಿನಾಂಕ: 07.10.2017ರಲ್ಲಿ ಕೆಟಿಪಿಪಿ ಕಾಯ್ದೆಯ ಕಲಂ 4(ಜಿ)ಯಡಿ ವಿನಾಯಿತಿ ನೀಡಿದೆ ಹಾಗೂ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಈ ತರಬೇತಿ ವೆಚ್ಚವನ್ನು ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ವಾಹಿನಿ-1 ರಡಿ ಲೆಕ್ಕ ಶೀರ್ಷಿಕೆ 2230-02-101-0-09 ಕೌಶಲ್ಯ ಅಭಿವೃದ್ಧಿ ಮಿಷನ್ ಅಡಿಯಲ್ಲಿ ಭರಿಸುವುದು.

**ಷರತ್ತು ಮತ್ತು ನಿಬಂಧನೆಗಳು**

1. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರು ಈ ಕೆಳಗಿನ ಕ್ರಮಗಳನ್ನು ಅನುಸರಿಸಿ ಮೇಲಿನ ವೃತ್ತಿ ತರಬೇತಿ ಸಂಸ್ಥೆಗೆ ತರಬೇತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಅನುಮತಿ ನೀಡುವುದು.

2. ವೃತ್ತಿ ಸಂಸ್ಥೆಗೆ ತರಬೇತಿಯ ಗುರಿಗಳ ಹಂಚಿಕೆ, ಅಭ್ಯರ್ಥಿಗಳಿಗೆ ತರಬೇತಿ, ಮೌಲ್ಯಮಾಪನ, ಪ್ರಮಾಣೀಕರಣ, ಉದ್ಯೋಗ ನಿಯುಕ್ತಿ ಮತ್ತು ಉದ್ಯೋಗ ನಿಯುಕ್ತಿ ನಂತರದ ಸೇವೆಗಳ ಕುರಿತ ವಿಧಾನಗಳ ಮಾರ್ಗಸೂಚಿಯಂತೆ ತಪಾಸಣೆ, **ಒಡಂಬಡಿಕೆಗೆ ಸಹಿಗಳನ್ನು ಹೊರತುಪಡಿಸಿ ಮುಂದಿನ ಕ್ರಮಗಳನ್ನು ಕೈಗೊಳ್ಳುವುದು.**

3. ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಮಂತ್ರಾಲಯವು ನಿಗದಿಪಡಿಸಿದ ಸಾಮಾನ್ಯ ಮಾನದಂಡಗಳ (ಕ್ರ.ಸಂ.H-22011/2/14-SDE-1, dated: 15.07.2015 and 20.05.2016: Schedule-IV)ರನ್ವಯ ಕಂತುಗಳಲ್ಲಿ ಪಾವತಿ ಮಾಡುವ ವಿಧಾನದ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡುವುದು.

4. ಎಲ್ಲಾ ತರಬೇತಿ ಕಾರ್ಯಕ್ರಮಗಳು ಪೂರ್ಣಗೊಂಡ ನಂತರ ಪ್ರಮಾಣಪತ್ರಗಳನ್ನು ನೀಡುವುದು. ಪ್ರಮಾಣಪತ್ರವನ್ನು ನೀಡಿದ ನಂತರ ಕನಿಷ್ಟ ಶೇಕಡ 70ರಷ್ಟು ಅಭ್ಯರ್ಥಿಗಳಿಗೆ ಉದ್ಯೋಗ ನಿಯುಕ್ತಿಗೊಳಿಸುವುದು ಅಥವಾ ಸ್ವಯಂ ಉದ್ಯೋಗ ಕಲ್ಪಿಸುವುದು.

5. ಎಲ್ಲಾ ತರಬೇತಿ ಕಾರ್ಯಕ್ರಮಗಳನ್ನು 2017-18ರ ಆರ್ಥಿಕ ವರ್ಷದಲ್ಲಿಯೇ ಪ್ರಾರಂಭಿಸುವುದು. ಮಾರ್ಗಸೂಚಿಯನ್ನು ಅನುಸರಿಸಿ ಉಸ್ತುವಾರಿ ಮಾಹಿತಿ ವ್ಯವಸ್ಥೆಯನ್ನು (ಎಂಐಎಸ್) ತಯಾರಿಸಿ ಕಾರ್ಯಕ್ರಮದ ಅನುಷ್ಟಾನದ ಜವಾಬ್ದಾರಿಯನ್ನು ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆಯವರು ನಿರ್ದೇಶಕರು ಕೌಶಲ್ಯ ಮಿಷನ್ ಮತ್ತು ನಿರ್ದೇಶಕರು ಉದ್ಯೋಗ ಮತ್ತು ತರಬೇತಿ ಇಲಾಖೆಯವರ ಸಹಾಯದೊಂದಿಗೆ ಅನುಷ್ಟಾನಗೊಳಿಸುವುದು.

6. ಸಿಪೆಟ್ ಮೈಸೂರು ಸಂಸ್ಥೆಯು ತರಬೇತಿ ಸಂಸ್ಥೆಯನ್ನು www.kaushalkar.com ವೆಬ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ನೊಂದಾಯಿಸುವುದು. ಅನುಮೋದಿತ ವೃತ್ತಿ ತರಬೇತಿ ಕಾರ್ಯಕ್ರಮಗಳ ಫಲಾನುಭವಿಗಳನ್ನು www.kaushalkar.com ವೆಬ್ ಪೋರ್ಟಲ್‌ನಿಂದ ಪಡೆಯುವುದು. ಒಂದು ವೇಳೆ ಫಲಾನುಭವಿಗಳು ಸಿಪೆಟ್ ಮೈಸೂರು ಸಂಸ್ಥೆಯಿಂದ ಆಯ್ಕೆ ಮಾಡಿಕೊಂಡಲ್ಲಿ ಇವರುಗಳ ಹೆಸರನ್ನು ವೆಬ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ನೊಂದಯಿಸವುದು.

7. ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ಅನುಷ್ಟಾನಗೊಳಿಸಲು ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 49 ಕೃತಶಿ (ಭಾಗ-1) ದಿನಾಂಕ: 08.05.2017ರಲ್ಲಿ ಹೊರಡಿಸಲಾಗಿರುವ ಮಾರ್ಗಸೂಚಿಯಂತೆ ವಿವಿಧ ವರ್ಗಗಳಿಗೆ ಒಟ್ಟು ತರಬೇತಿ ಅಭ್ಯರ್ಥಿಗಳಿಗೆ ನಿಗಧಿಪಡಿಸಿದಂತೆ ಶೇಕಡವಾರು ಮೀಸಲಾತಿಯನ್ನು ಅನುಸರಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಈರಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಎ&ಇ), ಜಿ&ಎಸ್.ಎಸ್.ಎ), ಇ &ಆರ್.ಎಸ್.ಎ) ಕರ್ನಾಟಕ, ಬೆಂಗಳೂರು.
2. ಆಯುಕ್ತರು ಉದ್ಯೋಗ ಮತ್ತು ತರಬೇತಿ ಇಲಾಖೆ.

3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
4. ವ್ಯವಸ್ಥಾಪಕ ನಿರ್ದೇಶಕರು, ಬಿಎಂಟಿಸಿ
5. ವ್ಯವಸ್ಥಾಪಕ ನಿರ್ದೇಶಕರು, ಈಶಾನ್ಯ ರಾಜ್ಯ ರಸ್ತೆ ಸಾರಿಗೆ ನಿಗಮ
6. ವ್ಯವಸ್ಥಾಪಕ ನಿರ್ದೇಶಕರು, ವಾಯುವ್ಯ ರಾಜ್ಯ ರಸ್ತೆ ಸಾರಿಗೆ ನಿಗಮ
7. ನಿರ್ದೇಶಕರು ಕರ್ನಾಟಕ ಕೌಶಲ್ಯ ಮಿಷನ್ ಉದ್ಯೋಗ ಮತ್ತು ತರಬೇತಿ ಇಲಾಖೆ.
8. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ,
9. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ,
10. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಮಟ್ಟದ ತಾಲ್ಲೂಕು ನೋಡಲ್ ಅಧಿಕಾರಿಗಳು,
11. ಸಿಪೆಟ್, ಮೈಸೂರು ಸಂಸ್ಥೆ, ನಂ. 437/ಎ, ಹೆಬ್ಬಾಳ ಇಂಡಸ್ಟ್ರೀಯಲ್ ಏರಿಯ, ಮೈಸುರು-560 016.
12. ಸಂಬಂಧಪಟ್ಟ ತಾಲ್ಲೂಕುಗಳಲ್ಲಿನ ಪ್ರಾಂಶುಪಾಲರು ಕೈಗಾರಿಕಾ ತರಬೇತಿ ಕೇಂದ್ರ,

ಪ್ರತಿಯನ್ನು :

1. ಮಾನ್ಯ ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು
3. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
4. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಮತ್ತು ಸಾಂಖ್ಯಿಕ ಇಲಾಖೆ.
7. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-3&9),ವಿಧಾನ ಸೌಧ, ಬೆಂಗಳೂರು
8. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು.
9. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ
10. ಮಿಷನ್ ನಿರ್ದೇಶಕರು, ಸಂಜೀವಿನಿ - ಕೆ.ಎಸ್.ಆರ್.ಎಲ್.ಪಿ.ಎಸ್.
11. ಮುಖ್ಯ ಯೋಜನಾಧಿಕಾರಿಗಳು, ನಗರ ಬಡತನ ನಿರ್ಮೂಲನಾ ನಿರ್ವಹಣಾ ಘಟಕ (ಯುಪಿಎಂಯು)
12. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಸಂಜೀವಿನಿ- ಕೆ.ಎಸ್.ಆರ್.ಎಲ್.ಪಿ.ಎಸ್. (ಸ್ಕಿಲ್ಸ್).
13. ಕೌಶಲ್ಯಾಭಿವೃದ್ಧಿ ತರಬೇತಿಗೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರು
14. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ವಿಧಾನ ಸೌಧ, ಬೆಂಗಳೂರು.
15. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
16. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
17. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವಿಕಾಸ ಸೌಧ.
18. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಅನುಬಂಧ-1 208

[redacted]

## 3. PROPOSED SKILL DEVELOPMENT TRAINING PROGRAMMES FOR THE YEAR 2017-18:

CIPET, MYSORE

| Sl. No. | Name of the programme | Minimum Qualification Required | Duration | Age Limit | Course fee per candidate per month including stipend * | Intake | Total sponsorship amount |
|---|---|---|---|---|---|---|---|
| 1 | Plastic Processing Machine Operation (PPMO) | SSLC (Pass) | 6 months | 18 to 35 Years | Rs.10,440/- | 125 | Rs.78,30,000/- |
| 2 | Injection Moulding Machine Operation & Maintenance (IMMOM) | PUC/ITI (Electrician) /Degree (Pass) | 6 months | 18 to 35 Years | Rs.10,440/- | 125 | Rs. 78,30,000/- |
| 3 | CNC Machine Programming & Operation (CNC-MPO) | ITI (Fitter/Turner /Machinist) Diploma in Tool & Die Making | 6 months | 18 to 35 Years | Rs.10,440/- | 50 | Rs.31,32,000/- |
| | | | | | TOTAL | 300 | Rs. 1,87,92,000/- |

* Stipend per candidate per month Rs. 500/-

Spoken English and Basic Computer is included to enhance the employability of candidates.

12/02/2017